# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

# ಕ್ರಿಮಿನಲ್ ಪ್ರಕರಣ ಸಂಖ್ಯೆ : 5827 / 2022

ಪಿರ್ಯಾದುದಾರರು : ಕುದೂರು ಪೋಲಿಸ್‌ಠಾಣೆ

**ವಿರುದ್ಧ**

**ಆರೋಪಿ : ಸಂತೋಷ್**

**ಚಾಸಾ :- 13 / ಪ್ರಾಸಾ :- 03**

| | |
|---|---|
| ಹೆಸರು | **ಎ. ಪಿ ಕುಮಾರ್** |
| ತಂದೆಯ / ಗಂಡನ ಹೆಸರು | **ಪುಟ್ಟಸ್ವಾಮ ಚಾರ್** |
| ವಯಸ್ಸು | **50** |
| ಉದ್ಯೋಗ | **ಪಿ.ಐ.** |
| ವಿಳಾಸ | **ನೆಲಮಂಗಲ ಸಂಚಾರಿ ಪೋಲಿಸ್ ಠಾಣೆ** |

**ದಿನಾಂಕಃ 13-03-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನಾನು ದಿಃ 03-6-2021 ರಿಂದ ದಿಃ 03-10-2023 ರವೆರೆಗೆ ಕುದೂರು ಪೋಲಿಸ್ ಠಾಣೆಯಲ್ಲಿ ಪಿ..ಐ. ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 12-03-2022 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿ.13-03-2022

ರಂದು ತನಿಖೆ ಮುಂದುವರೆಸಿ ಮೃತ ರಂಗಸ್ವಾಮಯ್ಯ ಉ. ಭಿಮಣ್ಣನವರ ಶವಾ ತನಿಖಾ ವರದಿಯನ್ನು ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಪಂಚಾಯಿತಿದಾರರಾದಾ ಚಾಸಾ-2 ರಿಂದ 5 ರವರ ಸಮಕ್ಷಮ ಬೆಳಗ್ಗೆ 7.30 ರಿಂದ 9.30 ರವರೆ ಶವ ತನಿಖೆಯನ್ನು ಕೈಗೊಂಡು ನಂತರ ವೈದ್ಯರಿಗೆ ಫಾರಂ. ನಂ. 146 ನ್ನು ಭರ್ತಿ ಮಾಡಿ ಮನವಿ ಪತ್ರವನ್ನು ಸಲ್ಲಿಸಿ ವೈದ್ಯರಿಂದ ಶವ ಪರೀಕ್ಷೆ ಆದ ನಂತರ ಮೃತ ದೇಹವನ್ನು ವಾರಸುದಾರರಿಗೆ ನೀಡಿ ಬರಲು ಹೆಚ್. ಸಿ-371 ಮಾರುತಿ ಕುಮಾರ್ ರವರಿಗೆ ತಿಳಿಸಿರುತ್ತೇನೆ. ಸಾಕ್ಷಿಯು ಶವ ತನಿಖೆ ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ಶವ ತನಿಖಾ ವರದಿಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಜಾಗದಲ್ಲಿ ಪಂಚಾಯಿತಿದಾರರಾದ ಚಾಸಾ-7 ಮತ್ತು 8 ರವರ ಸಮಕ್ಷಮ ಸಂಜೆ 4 ರಿಂದ 5 ಗಂಟೆಯವರೆಗೂ ಪಂಚನಾಮೆಕ್ರಮ ಅನುಸರಿಸಿ ಪಂಚನಾಮೆ ಕಾಲದಲ್ಲಿ ಮಾಲು ಪಟ್ಟಿ ಸಂ. 102/2022 ರಂತೆ ಟಿ. ವಿ. ಎಸ್ ಎಕ್ಸೆಲ್ ಕೆಎ-42-ಆರ್ 9762 ಹಾಗೂ ಆರೋಪಿಯ ವಾಹನವಾದ ಕೆಎ-51-ಎಂಡಿ-8347 ಹುಡ್ಯೆ ಕಾರನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಅದೇ ದಿನ ಹೆಚ್. ಸಿ ಮಾರುತಿ ಕುಮಾರ್ ರವರಿಂದ 65-ಬಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಈಗಾಗಲೇ ನಿಪಿ-2 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮಾಲು ಪಟ್ಟಿಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಮಾಲು ಪಟ್ಟಿಯನ್ನು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

65- ಪ್ರಮಾಣಪತ್ರ ವನ್ನು ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ?ಚಾಸಾ-6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.14-03-2022 ರಂದು ಚಾಸಾ-9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.15-03-2022 ರಂದು ಅಪಘಾತ ಉಂಟು ಮಾಡಿದ ಕೆಎ-51-ಎಂಡಿ-8347 ಕಾರಿನ ಮಾಲೀಕರಿಗೆ ಕಲಂ. 133 ನೋಟಿಸ್ ಜಾರಿ ಮಾಡಿರುತ್ತೇನೆ. ಸಾಕ್ಷಿಗೆ 133 ನೋಟಿಸ್ ನ್ನು ತೋರಿಸಲಾಗಿ, ಸದರಿ ನೋಟಿಸ್ ನ್ನು ನಿಪಿ-14 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ದಿ.16-03-2022 ರಂದು ಕಾರಿನ ಮಾಲಿಕರಾದ ಸಂತೋಷ್ ರವರು ಠಾಣೆಗೆ ಹಾಜರಾಗಿ ನೀಡಿದ ನೋಟಿಸ್ ಗೆ ಪರತ್ಯುತ್ತರ ನೋಟಿಸ್ ನ್ನು ನೀಡಿರುತ್ತಾರೆ. ಸಾಕ್ಷಿಗೆ ಪ್ರತ್ಯುತ್ತರ ನೋಟಿಸ್ ನ್ನು ತೋರಿಸಲಾಗಿ, ಸದರಿ ನೋಟಿಸ್ ನ್ನು ನಿಪಿ-15 ಎಂದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಸದರಿ ವಾಹನ ಮಾಲೀಕರೇ ಅರೋಪಿಯಾಗಿದ್ದು ಅರೋಪಿಯ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ನಂತರ ವಾಹನದ ಐ. ಎಂ. ವಿ ಪರೀಕ್ಷೆಯನ್ನು ಅನುಸರಿಸಿ ವಾಹನವನ್ನು ವಾಹನ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಗೆ ಐ. ಎಂ. ವಿ ವರದಿಯನ್ನು ತೋರಿಸಲಾಗಿ, ಸದರಿ ವರದಿಯನ್ನು ನಿಪಿ-16 ಎಂದು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ದಿ.16-03-2022 ರಂದು ಮೃತ ರಂಗಸ್ವಾಮಯ್ಯನವರ ಪಿ. ಎಂ ವರದಿಯನ್ನು ಮಾಗಡಿ ಸರ್ಕಾರಿ ಅಸ್ಪತ್ರೆಯ

ವೈಧ್ಯಾಧಿಕಾರಿಯಿಂದ ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ಪಿ. ಎಂ ವರದಿಯನ್ನು ತೋರಿಸಲಾಗಿ, ಸದರಿ ವರದಿಯನ್ನು ನಿಪಿ-17 ಎಂದು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ದಿ.25-03-2022 ರಂದು ಐ. ಎಂ. ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿ.20-05-2022 ರಂದು ಸದರಿ ಪ್ರಕರಣದ ತನಿಖೆಯನ್ನು ಪೂರ್ಣ ಗೊಳಿಸಿ ಆರೋಪಿಯ ವಿರುದ್ದ ಆರೋಪ ಸಾಬೀತಾಗಿದ್ದ ಕಾರಣದಿಂದ ಅರೋಪಿಯ ವಿರುದ್ದ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು :- ಶ್ರೀ. ಎನ್.ಜಿ.** ವಕೀಲರಿಂದ **ಆರೋಪಿ** ಪರವಾಗಿ :-

ದಿ.13-03-2022 ರಂದು ನೀವು ಮಾಗಡಿ ಸರ್ಕಾರಿ ಆಸ್ಪತ್ರೆಗೆ ಹೋಗಿರುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ-3 ರಿಂದ 5 ರವರಿಗೆ ನೋಟಿಸ್ ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳಕ್ಕೆ ಹೋಗಿ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ. ಮೃತ ರಂಗಸ್ವಾಮಯ್ಯನವರಿಗೆ ಸಹಾಯವಾಗಲೆಂದು ಅರೋಪಿಯ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ದಿ.14-03-2022 ರಂದು ಚಾಸಾ-9 ರವರ ಹೇಳಿಕೆ ಸಹ ಪಡೆದುಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**

# ಕ್ರಿಮಿನಲ್ ಪ್ರಕರಣ ಸಂಖ್ಯೆ : 5827 / 2022

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ : ಸಂತೋಷ್**

**ಚಾಸಾ :- 7 / ಪ್ರಾಸಾ :- 04**

| | |
|---|---|
| ಹೆಸರು | **ಲಕ್ಷ್ಮಣ್** |
| ತಂದೆಯ / ಗಂಡನ ಹೆಸರು | **ಜಯರಾಮಯ್ಯ** |
| ವಯಸ್ಸು | **33** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ರಸ್ತೆ ಪಾಳ್ಯ** |

**ದಿನಾಂಕ: 13-03-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಅಪಘಾತ ವಾಗಿರುವ ವಿಚಾರವಾಗಿ ದಿ.13-03-2022 ರಂದು ಬಗೀನಗೆರೆ ಉ ಟರ್ನ್ ಬಳಿ ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ನನ್ನ ಹಾಗೂ ಚಾಸಾ-1 ಮತ್ತು 8 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿ ಸ್ಥಳ ಪಂಚನಾಮೆ ಕಾಲಕ್ಕೆ ನಮ್ಮಗಳ ಸಮಕ್ಷಮ ಕೆಎ-42-ಆರ್-9762 ವಾಹನವನ್ನು ಹಾಗೂ ವರ್ಣಾ ಕಾರನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ಅಪಘಾತ ಪಡಿಸಿದ ವಾಹನ ಸಂ. ಕೆಎ-51-ಎಂಡಿ-8347 ಹೊಂಡಾ ವರ್ಣಾ ಕಾರು ಎಂದರೆ ಸರಿ.**

**ಪಾಟೀ ಸವಾಲು ಃ- ಶ್ರೀ. ಎನ್. ಜಿ. ವಕೀಲರಿಂದ ಆರೋಪಿಗಳ ಪರವಾಗಿ ಃ-**

ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು ನಿರಾಕರಿಸಲಾಯಿತು.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**

# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ
# ನ್ಯಾಯಾಲಯ ಮಾಗಡಿ
## ಕ್ರಿಮಿನಲ್ ಪ್ರಕರಣ ಸಂಖ್ಯೆ : 5827 / 2022

ಪಿರ್ಯಾದುದಾರರು : ಕುದೂರು ಪೋಲಿಸ್‌ಠಾಣೆ

**ವಿರುದ್ಧ**

**ಆರೋಪಿ : ಸಂತೋಷ್**

**ಚಾಸಾ :- 8 / ಪ್ರಾಸಾ :- 05**

| | |
|---|---|
| ಹೆಸರು | **ರಾಮಚಂದ್ರಯ್ಯ** |
| ತಂದೆಯ / ಗಂಡನ ಹೆಸರು | **ಟಿ. ಕೆ ಅಂದಾನಯ್ಯ** |
| ವಯಸ್ಸು | **60** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ರಸ್ತೆಪಾಳ್ಯ** |

**ದಿನಾಂಕ: 13-03-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಅಪಘಾತವಾಗಿರುವ ವಿಚಾರವಾಗಿ ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಸಂಜೆ 4.30 ರಿಂದ 5.00 ಗಂಟೆ ಸಮಯದಲ್ಲಿ ನಾನು, ಚಾಸಾ-1 ಮತ್ತು ಚಾಸಾ-7 ರವರು ಇದ್ದು ಸ್ಥಳ ಪಂಚನಾಮೆಯನ್ನು ಜರುಗಿಸಿ ಸ್ಥಳ ಪಂಚನಾಮೆ ಕಾಲಕ್ಕೆ ನಮ್ಮಗಳ ಸಮಕ್ಷಮ ಟಿ. ವಿ. ಎಸ್ ಎಕ್ಸೆಲ್ ವಾಹನ 8762 ಹಾಗೂ

ಕಾರಿನ ಸಂ. 8347 ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ದಿ.13-03-2022 ರಂದು ಸಂಜೆ 4 ರಿಂದ 5 ಗಂಟೆ ವರೆಗೂ ಮಹಜರ್ ಕ್ರಮ ಅನುಸರಿಸುತ್ತಾರೆ ಎಂದರೆ ಸರಿ.** ಅಪಘಾತ ಪಡಿಸಿದ ಕಾರಿನ ಸಂ. ಕೆಎ-51-ಎಂಡಿ-8347 ಹಾಗೂ ಅಪಘಾತಕ್ಕೆ ಒಳಗಾದ ಟಿ. ವಿಎಸ್ ಎಕ್ಸೆಲ್ ವಾಹನ ಸಂ. ಕೆಎ-42-ಆರ್-9762 ಎಂದರೆ ಸರಿ.

**ಪಾಟೀ ಸವಾಲು ಃ- ಶ್ರೀ. ಎನ್. ಜಿ. ವಕೀಲರಿಂದ ಆರೋಪಿಗಳ ಪರವಾಗಿ ಃ-**

ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು, ನಿರಾಕರಿಸಲಾಯಿತು.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**

# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

# ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 700 / 2018

ಪಿರ್ಯಾದುದಾರರು ಃ ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ ಃ ಇಸಾಕ್ ಪಾಷ**

**ಚಾಸಾ ಃ- 16 / ಪ್ರಾಸಾ ಃ- 04**

| | |
|---|---|
| ಹೆಸರು | **ಮುರಳಿಧರ** |
| ತಂದೆಯ / ಗಂಡನ ಹೆಸರು | **ಕೃಷ್ಣೇಗೌಡ** |
| ವಯಸ್ಸು | **40** |
| ಉದ್ಯೋಗ | **ಪಿ.ಐ.** |
| ವಿಳಾಸ | **ಮಾದನಾಯಕನಹಳ್ಳಿ ಪೋಲಿಸ್ ಠಾಣೆ** |

**ದಿನಾಂಕಃ 19-12-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ನಾನು ದಿಃ 07-5-2015 ರಿಂದ ದಿಃ 26-06-2016 ರವರೆಗೆ ಕುದೂರು ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ. ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 19-03-2016 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 11 ಗಂಟೆಯ ಸಮಯದಲ್ಲಿ ಪ್ರಕರಣದ 2 ನೇ ಪಿರ್ಯಾದಿ ಚಾಸಾ-2 ರವರು ಠಾಣೆಗೆ

ಹಾಜರಾಗಿ ಹೀಗ್ಗೆ ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿ ಕೋಡಯ್ಯನವರು ನೆಲಮಂಗಲ ಎಂ.ಎಸ್ ರಾಮಯ್ಯ ಹರ್ಷ ಆಸ್ಪತ್ರೆಗೆ ತೋರಿಸಿ, ನಂತರ ಬೆಂಗಳೂರಿನ ನಿಮಾನ್ಸ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರೂ ಗುಣವಾಗದೇ ದಿನಾಂಕಃ 29-03-2016 ರಂದು ಸಂಜೆ 7.30 ಗಂಟೆಗೆ ಮೃತಪಟ್ಟಿರುತ್ತಾರೆಂದು, ಮೊದಲೇ ದಾಖಲಿಸಿದ ದೂರನ್ನು ಪಡೆದು ಠಾಣ ಮೊಕದ್ದಮ್ಮೆ ಸಂಖ್ಯೆಃ 83/2016 ಕಲಂ-279, 337 ರ ಐಪಿಸಿ ನಲ್ಲಿ ಕಲಂ-304(ಎ) ಅಳವಡಿಸಿಕೊಂಡಿದ್ದು ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

2. ನಂತರ ದಿಃ 19-03-2016 ರಂದು ಗುರುಸ್ವಾಮಿ ಬಿನ್ ಲೇಟ್ ಅಂಕಪ್ಪ ರವರಿಗೆ ಕಲಂ-133 ರೀತಿ ಐಎಂವಿ ನೋಟಿಸ್ ಜಾರಿ ಮಾಡಿದ್ದು, ಸದರಿಯವರಿಂದ ಪ್ರತ್ಯುತ್ತರ ಪಡೆದುಕೊಂಡಿರುತ್ತೇನೆ. ಸದರಿಯವರು ವಾಹನ ದಾಖಲಾತಿಗಳನ್ನು ನನ್ನ ಮುಂದೆ ಹಾಜರು ಪಡಿಸಿದ್ದು, ಚಾಲ್ತಿಯಲ್ಲಿದ್ದ ವಾಹನದ ದಾಖಲಾತಿಗಳ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ಸಾಕ್ಷಿ ಕಲಂ-133 ರೀತಿ ಐಎಂವಿ ನೋಟಿಸನ್ನು ನೋಡಿ ಗುರುತಿಸಿದ್ದು, ಕಲಂ-133 ರೀತಿ ಐಎಂವಿ ನೋಟಿಸನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಗುರುಸ್ವಾಮಿ ರವರ ಪ್ರತ್ಯುತ್ತರ ನೋಟಿಸನ್ನು

ನೋಡಿ ಗುರುತಿಸಿದ್ದು, ಪ್ರತ್ಯುತ್ತರ ನೋಟಿಸನ್ನು ನಿಪಿ-11 ಎಂದು ಗುರುತಿಸಲಾಯಿತು. ಆರೋಪಿ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಇನ್ನಿಡಿಮಿಟಿ ಬಾಂಡನ್ನು ಪಡೆದುಕೊಂಡು ವಾಹನದ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿ ಇನ್ನಿಡಿಮಿಟಿ ಬಾಂಡನ್ನು ನೋಡಿ ಗುರುತಿಸಿದ್ದು, ಸದರಿ ಬಾಂಡನ್ನು ಈಗಾಗಲೇ ಒಪ್ಪಿಗೆ ಮೇರೆಗೆ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ದಿನಾಂಕಃ 30-03-2016 ರಂದು ಚಾಸಾ-17 ರವರ ಮೌಖಿಕ ಆದೇಶದ ಮೇರೆಗೆ ತನಿಖೆ ಮುಂದುವರೆಸಿ ಮೃತ ಕೋಡಯ್ಯ ರವರ ಶವ ಪಂಚನಾಮೆಗಾಗಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಪಂಚರಿಗೆ ಫಾರಂ ನಂಬರ್-144 ರೀತಿ ಚಾಸಾ-6 ರಿಂದ 10 ರವರಿಗೆ ನೋಟಿಸ್ ಜಾರಿ ಮಾಡಿ, ಚಾಸಾ-9 ಮತ್ತು 10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಮೃತರ ಶವವನ್ನು ವೈದ್ಯಾಧಿಕಾರಿಗಳಿಂದ ಶವ ತನಿಖೆ ಮಾಡಿಸಿ, ಮೃತರ ಸಂಬಂಧಿಕರಿಗೆ ಹಸ್ತಾಂತರಿಸಿರುತ್ತೇನೆ. ದಿನಾಂಕಃ 30-03-2016 ರಂದು ಶವ ಶನಿಖೆಯನ್ನು ಅದೇ ದಿವಸ ಬೆಳಿಗ್ಗೆ 8 ರಿಂದ 10.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಸಾಕ್ಷಿಯು ಶವ ತನಿಖಾ ವರದಿಯನ್ನು ನೋಡಿ ಗುರುತಿಸಿದ್ದು, ಶವ ತನಿಖಾ ವರದಿಯನ್ನು ಈಗಾಗಲೇ ಒಪ್ಪಿಗೆ ಮೇರೆಗೆ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಚಾಸಾ-14 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಕರಣವನ್ನು ಮುಂದಿನ ತನಿಖೆಯನ್ನು ಚಾಸಾ-17 ರವರಿಗೆ ವರ್ಗಾಹಿಸಿಕೊಂಡಿರುತ್ತೇನೆ.

**ಪಾಟೀ ಸವಾಲು ಃ- ಶ್ರೀ. ಜಿ.ಹೆಚ್.ಎಂ.** ವಕೀಲರಿಂದ **ಆರೋಪಿ** ಪರವಾಗಿ ಃ-

ಎರಡನೇ ಪಿರ್ಯಾದುದಾರರು ನಿಮ್ಮ ಮುಂದೆ ಹಾಜರಾಗಿ 2 ನೇ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸೂಕ್ತ ದಾಖಲಾತಿಗಳನ್ನು ಪರಿಶೀಲನೆ ಮಾಡದೇ ವಾಹನ ಬಿಡುಗಡೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತದ ಸ್ಥಳದಲ್ಲಿ ನೀವು ಯಾವುದೇ ಮಹಜರ್ ಕ್ರಮ ಅನುಸರಿಸಿರುವುದಿಲ್ಲ, ಠಾಣೆಯಲ್ಲಿ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಪಂಚರಿಗೆ ಹಾಜರಾಗಲು ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿ. ನೀವು ಸುಳ್ಳು ದೂರನ್ನು ದಾಖಲಿಸಿಕೊಂಡು, ಸುಳ್ಳು ಪ್ರಥಮ ವರ್ತಮಾನ ದಾಖಲಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತ ಪರಿಹಾರ ಕೊಡಿಸಲು ಪಿರ್ಯಾದಾರರಿಂದ ಸುಳ್ಳು ಪಿರ್ಯಾದನ್ನು ಪಡೆದು ಸದರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**